ಇ) ರಾತ್ರಿ ಆಕಸ್ಮಿಕವಾಗಿ ಅಪಘಾತ ರೋಗಿಗಳು ಬಂದಾಗ ಎಕ್ಸರೇ ವ್ಯವಸ್ಥೆ ಲಭ್ಯವಿಲ್ಲದೇ ರೋಗಿಗಳಿಗೆ ಆಗುವ ತೊಂದರೆ ಹಾಗೂ ಅವರು ಬೇರೆ ಆಸ್ಪತ್ರೆಗೆ ಇದರ ಕಾರಣಕ್ಕಾಗಿ ಹೋಗುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಲೇಡಿಗೋಷನ್ ಆಸ್ಪತ್ರೆಯಿಂದ ಕೆ.ಇ.ಬಿ.ಗೆ ಬಾಕಿ ಇರುವ ವಿದ್ಯುತ್ ಶುಲ್ಕವನ್ನು ಸರ್ಕಾರವು ಭರಿಸುವುದೇ ಇಲ್ಲವೇ ಕೆ.ಇ.ಬಿ. ಯವರು ಅದನ್ನು ಮನ್ನಾ ಮಾಡಲು ಆದೇಶ ಕೊಡಲಾಗುವುದೇ?

ಉ) ವೆನ್‌ಲಾಕ್ ಆಸ್ಪತ್ರೆಯ ಒಳಚರಂಡಿ ವ್ಯವಸ್ಥೆ ಹದಗೆಟ್ಟಿದ್ದು ಅದರಿಂದ ಆಸ್ಪತ್ರೆಯ ನೈರ್ಮಲ್ಯವು ತುಂಬಾ ತೊಂದರೆಯುಂಟಾಗುತ್ತದೆ. ಈ ಬಗ್ಗೆ ತೀವ್ರ ಗಮನಹರಿಸಿ ಕ್ರಮ ಕೈಗೊಳ್ಳುವುದೇ?

ಊ) ವೆನ್‌ಲಾಕ್ ಜಿಲ್ಲಾ ಆಸ್ಪತ್ರೆಯಲ್ಲಿ ಲಭ್ಯವಿರುವ ಜನರೇಟರ್ ಸಂಖ್ಯೆ ಎಷ್ಟು ಮತ್ತು ಕಾರ್ಯ ನಿರ್ವಹಿಸುತ್ತಿರುವ ಜನರೇಟರ್‌ಗಳು ಎಷ್ಟು ಕಾರ್ಯನಿರ್ವಹಿಸದೇ ಇರುವ ಜನರೇಟರ್‌ಗಳು ಎಷ್ಟು? ಕಾರ್ಯನಿರ್ವಹಿಸದೇ ಇರುವುದಕ್ಕೆ ಕಾರಣಗಳಾವುವು ಮತ್ತು ಇದಕ್ಕೆ ಯಾರು ಜವಾಬ್ದಾರರು?

ಶ್ರೀ ಎ.ಬಿ. ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) ಸಾಧ್ಯತೆ ಇದೆ.

ಆ) ಒಟ್ಟು 7 ಅವುಗಳಲ್ಲಿ ಸರಿಯಾಗಿ ಕೆಲಸ ನಿರ್ವಹಿಸುವ ಯಂತ್ರಗಳ ಸಂಖ್ಯೆ ಒಟ್ಟು 4

ಆಸ್ಪತ್ರೆಗೆ ಮಂಜೂರಾಗಿರುವ ಒಂದು ರೇಡಿಯೋ ಗ್ರಾಫರ್ ಎರಡು ಕ್ಷಕಿರಣ ಟೆಕ್ನೀಷಿಯನ್ ಹುದ್ದೆಗಳು ಖಾಲಿ ಇದ್ದು ಹಾಲಿ ನಿಯೋಜಿತ ಒಬ್ಬ ಕ್ಷ ಕಿರಣ ತಂತ್ರಜ್ಞ ಕಾರ್ಯ ನಿರ್ವಹಿಸುತ್ತಿದ್ದಾರೆ. ಮಂಜೂರಾಗಿರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ವಹಿಸಲಾಗುವುದು.

ಇ) ಬಂದಿರುವುದಿಲ್ಲ.

ಈ) ಲೇಡಿ ಗೋಷನ್ ಆಸ್ಪತ್ರೆಯಿಂದ ಕೆ.ಇ.ಬಿ.ಗೆ ಬಾಕಿ ಇರುವ ವಿದ್ಯುತ್ ಶುಲ್ಕ ಈಗಾಗಲೇ ಪಾವತಿಸಲಾಗಿದ್ದು ಆ ಬಗ್ಗೆ ಅಪೀಲು ಕೂಡ ಮಾಡಲಾಗಿದೆ.

ಉ) ವೆನ್‌ಲಾಕ್ ಜಿಲ್ಲಾ ಆಸ್ಪತ್ರೆಯ ಒಳಚರಂಡಿ ವ್ಯವಸ್ಥೆ ಸುಮಾರು 30 ವರ್ಷ ಗಳಿಗಿಂತಲೂ ಹಳೆಯದಾಗಿದ್ದು, ಆಗಾಗ್ಗೆ ಕಟ್ಟಿಕೊಳ್ಳುತ್ತಿದ್ದು (ಬ್ಲಾಕ್) ದುರಸ್ಥಿಗೊಳಪಡಿಸಲಾಗುತ್ತದೆ. ಎಲ್ಲಾ ಹಳೆಯ ಡ್ರೈನೇಜ್ ಪೈಪುಗಳನ್ನು ಬದಲಾಯಿಸುವ ಅವಶ್ಯಕತೆಯಿದ್ದು ಸಾರ್ವಜನಿಕ ಕಾಮಗಾರಿ ಇಲಾಖೆ ಅನುದಾನದ ಲಭ್ಯತೆಗನುಗುಣವಾಗಿ ಈ ಕಾರ್ಯ ಕೈಗೆತ್ತಿಕೊಳ್ಳಲಾಗುತ್ತಿದೆ.

ಊ) ಒಟ್ಟು 7, ಅವುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಜನರೇಟರ್‌ಗಳು 4, ಉಳಿದ 3 ಜನರೇಟರ್‌ಗಳು ದುರಸ್ಥಿಯಲ್ಲಿವೆ.

ಜನರೇಟರ್‌ಗಳನ್ನು ನಡೆಸುವ ಮಂಜೂರಾಗಿರುವ ಡೀಸೆಲ್ ಮೆಕಾನಿಕ್ ಹುದ್ದೆಯು ಖಾಲಿ ಬಿದ್ದಿದ್ದು ಹಾಲಿ 2ದೊಡ್ಡ ಜನರೇಟರ್‌ಗಳು ಮಾತ್ರ ಉಪಯೋಗಿಸಿಕೊಳ್ಳಲಾಗುತ್ತಿದೆ. ಎಲ್ಲಾ ಜನರೇಟರುಗಳು ಕಾರ್ಯನಿರ್ವಹಿಸುವ ಸ್ಥಿತಿಯಲ್ಲಿದೆ.

ರಾಜ್ಯದಲ್ಲಿರುವ ಅರಣ್ಯ ಭೂಮಿ ಕುರಿತು

2478 - ಶ್ರೀ ಡಿ.ಆರ್. ಪಾಟೀಲ್ (ಗದಗ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಒಟ್ಟು ಭೌಗೋಳಿಕ ವಿಸ್ತೀರ್ಣದಲ್ಲಿ ಅರಣ್ಯ ಭೂಮಿ ಎಷ್ಟಿದೆ ಹಾಗೂ ಎಷ್ಟು ಪ್ರಮಾಣದಲ್ಲಿದೆ?

ಆ) ರಾಜ್ಯದ ಅರಣ್ಯದಲ್ಲಿ ಮಾಡಲಾಗಿರುವ ವರ್ಗಗಳು ಎಷ್ಟು (ಪ್ರತ್ಯೇಕ ವರ್ಗದಲ್ಲಿರುವ ಭೂಮಿ ಎಷ್ಟು)

ಇ) ಪ್ರತ್ಯೇಕ ವರ್ಗದಲ್ಲಿರುವ ಅರಣ್ಯದಲ್ಲಿಯ ವೈಶಿಷ್ಟಮಯ ಅರಣ್ಯ ಸಂಪತ್ತು ಯಾವುದು?

ಈ) ಅಮೂಲ್ಯವಾದ ಔಷಧಿ ಗುಣವುಳ್ಳ, ಗಿಡಮೂಲಿಕೆಗಳನ್ನು ಅರಣ್ಯ ಪ್ರದೇಶಗಳಲ್ಲಿ ಸಂರಕ್ಷಿಸಲು ಹಾಗೂ ಬೆಳೆಸಲು ಸರಕಾರ ಯಾವ ಕ್ರಮ ಕೈಗೊಂಡಿದೆ.

ಉ) ಅಮೂಲ್ಯವಾದ ಔಷಧಿ ಗಿಡ ಮೂಲಿಕೆಗಳಿರುವ ಅರಣ್ಯ ಪ್ರದೇಶ ಎಷ್ಟು ಹಾಗೂ ಆ ಪ್ರದೇಶ ಯಾವ ಯಾವ ಭಾಗದಲ್ಲಿವೆ?

ಶ್ರೀ ಹೆಚ್.ವೈ. ಮೇಟಿ (ಅರಣ್ಯ ಸಚಿವರು) :

ಅ) ಕರ್ನಾಟಕ ರಾಜ್ಯದಲ್ಲಿರುವ 1,90,494 ಚ.ಕಿ.ಮಿ. ಭೂ ಪ್ರದೇಶದಲ್ಲಿ 38,723.56 ಚ.ಕಿ.ಮಿ. ಅರಣ್ಯ ಪ್ರದೇಶವಿದೆ, ಇದು ಭೂ ಪ್ರದೇಶದ ಶೇ. 20 : 29 ಪ್ರಮಾಣದಲ್ಲಿದೆ.

ಆ) ರಾಜ್ಯದ ಅರಣ್ಯದ 5 ವಿಧವಾಗಿ ವರ್ಗಾ ಮಾಡಲಾಗಿದೆ.

		(ಚ.ಕಿ.ಮೀ.ಗಳಲ್ಲಿ)
1)	ಮೀಸಲು (ಕಾಯ್ದಿಟ್ಟ) ಅರಣ್ಯ	28610.53
2)	ರಕ್ಷಿಸಲ್ಪಟ್ಟ ಅರಣ್ಯ	3932.17
3)	ವರ್ಗೀಕರಿಸಿದ ಅರಣ್ಯ	5748.24
4)	ಗ್ರಾಮಾಂತರ ಅರಣ್ಯ	124.20
5)	ಖಾಸಗೀ ಅರಣ್ಯ	308.42
	ಒಟ್ಟು	38723.56

ಇ) ಮೀಸಲು ಅರಣ್ಯದಲ್ಲಿ, ನಿತ್ಯಹರಿದ್ವರ್ಣ ಪಾರ್ಶ್ವ ಹರಿದ್ವರ್ಣ, ತೇವಷರ್ಣಪಾತಿ, ಮಿಶ್ರ ವರ್ಣ ಪಾತಿ, ಶುಷ್ಕವರ್ಣಪಾತಿ, ಕುರುಚಲು ವರ್ಗದ ನಮೂನೆಯ ಅರಣ್ಯಗಳು ನಮ್ಮ ಕರ್ನಾಟಕ ರಾಜ್ಯದಲ್ಲಿ ಇರುತ್ತವೆ. ಈ ವರ್ಗಗಳಲ್ಲಿ ಇರಬಹುದಾದಂತಹ ವೈಶಿಷ್ಟಮಯ ಅರಣ್ಯ ಸಂಪತ್ತು ಎಂದರೆ ಔಷಧಿ ಗುಣಗಳುಳ್ಳ ಗಿಡ ಮೂಲಿಕೆಗಳ ಪಟ್ಟಿಯನ್ನು ಅನುಬಂಧದಲ್ಲಿ ತೋರಿಸಲಾಗಿದೆ.

ಈ) ಈ ಅಮೂಲ್ಯವಾದ ಔಷಧಿ ಗುಣವುಳ್ಳ ಗಿಡಮೂಲಿಕೆಗಳನ್ನು ಅರಣ್ಯ ಪ್ರದೇಶದಲ್ಲಿ ಸಂರಕ್ಷಿಸಲು ಎಸ್‌ಆರ್‌ಎಲ್‌ಪಿಟಿ ಎಂಬ ಸಂಘ ಸಂಸ್ಥೆಯೊಂದಿಗೆ 12 ಎಂ.ಪಿ.ಸಿ.ಎ. ಪ್ರದೇಶಗಳನ್ನು ಗುರುತಿಸಲಾಗಿ ಅವುಗಳು ಎಲ್ಲಾ ವರ್ಗಕ್ಕೆ ಬರುವ ಹಾಗೆ ಆರಿಸಲಾಗಿದೆ. ಈ 12 ಎಂ.ಪಿ.ಸಿ.ಎ. ಪ್ರದೇಶಗಳನ್ನು (ಔಷಧಿ ಸಸ್ಯಗಳ ಸಂರಕ್ಷಣಾ ಪ್ರದೇಶಗಳು) ಈ ಕೆಳಗಿನಂತೆ ತೋರಿಸಲಾಗಿದೆ.

ಬಿಳಿಗಿರಿರಂಗನ ಬೆಟ್ಟ (ಮೈಸೂರು)	150 ಹೆಕ್ಟೇರ್
ತಲಕಾವೇರಿ (ಮಡಿಕೇರಿ)	80 ಹೆಕ್ಟೇರ್
ಸಾವನದುರ್ಗ (ಬೆಂಗಳೂರು)	280 ಹೆಕ್ಟೇರ್

ಸುಬ್ರಮಣ್ಯ ದೇವಸ್ಥಾನ (ಮಂಗಳೂರು)	200 ಹೆಕ್ಟೇರ್
ಚಾರ್ಮುಡಿ. ಘಾಟ್	200 ಹೆಕ್ಟೇರು
ದೇವರಾಯನದುರ್ಗ (ತುಮಕೂರು)	178 ಹೆಕ್ಟೇರು
ಕುದುರೆಮುಖ (ಚಿಕ್ಕಮಗಳೂರು)	200 ಹೆಕ್ಟೇರು
ಕೆಮ್ಮಣ್ಣುಗುಂಡಿ (ಚಿಕ್ಕಮಗಳೂರು)	300 ಹೆಕ್ಟೇರು
ಆಗುಂಬೆ (ಶಿವಮೊಗ್ಗ)	210 ಹೆಕ್ಟೇರು
ದೇವಿಮನೆ (ಕಾರವಾರ)	210 ಹೆಕ್ಟೇರು
ಸಂಡೂರು (ಬಳ್ಳಾರಿ)	110 ಹೆಕ್ಟೇರು
ಕರ್ಪಕಪಲ್ಲಿ (ಬೀದರ್)	150 ಹೆಕ್ಟೇರು

ಈ ಪ್ರದೇಶಗಳಲ್ಲಿ ಸಂರಕ್ಷಣಾ ಕಾರ್ಯಕ್ರಮಗಳನ್ನು ಉತ್ತಮ ರೀತಿಯಲ್ಲಿ ಮುಂದುವರಿಸಲಾಗಿದೆ.

ಇದು ಅಲ್ಲದೆ ಬೆಂಗಳೂರು ವಿಶ್ವವಿದ್ಯಾನಿಲಯದ ಹತ್ತಿರ ೩೫ ಎಕರೆ ಭೂ ಪ್ರದೇಶದಲ್ಲಿ ಧನ್ವಂತ್ರಿ ವನವನ್ನು ನಿರ್ಮಿಸಿ ಎಲ್ಲಾ ಬಗೆಯ ಔಷಧಿ ಗಿಡಗಳನ್ನು ಸದರಿ ಪ್ರದೇಶದಲ್ಲಿ ಬೆಳೆಸಿ ಸಾರ್ವಜನಿಕರಿಗೆ ವಿತರಿಸಲಾಗುತ್ತಿದೆ ಹಾಗೂ ಸಂಶೋಧನ ವಲಯದ ಅನೇಕ ಭಾಗಗಳಲ್ಲಿ ಪ್ರಯೋಗಾತ್ಮಕವಾದ ವಿವಿಧ ಜಾತಿಯ ಔಷಧಿ ಸಸ್ಯಗಳನ್ನು ಬೆಳೆಸಲಾಗುತ್ತಿದೆ.

ಉ) ಅರಣ್ಯ ಇಲಾಖೆಯಲ್ಲಿ ಮೀಸಲು ಅರಣ್ಯ ರಕ್ಷಿತ ಅರಣ್ಯ ಹಾಗೂ ಅವರ್ಗೀಕೃತ ಅರಣ್ಯಗಳಿದ್ದು ಈ ಎಲ್ಲಾ ಪ್ರದೇಶಗಳಲ್ಲಿಯೂ ಅಮೂಲ್ಯವಾದ ಔಷಧಿ ಗಿಡ ಮೂಲಿಕೆಗಳು ದೊರೆಯುತ್ತವೆ.

ಅನುಬಂಧ

1. ಎಕ್ಕೆ
2. ಬಿಳಿ ಎಕ್ಕೆ
3. ಚೊಗಚಿ
4. ಹೊಳೆಮಡ್ತಿ
5. ಉತ್ತರಾಣಿ
6. ನೆಲ್ಲಿಮರ
7. ಅಶೋಕ
8. ಅರಳಿ
9. ಹುಣಸೆ
10. ಆಗಸೀ
11. ಇರುವಂತಿಕೆ

12. ಉತ್ಪಲ, ಕಮಲ
13. ಉಮ್ಮತ್ತಿ
14. ಅತ್ತಿ
15. ಬಾಳೆ
16. ಕದಂಬ, ಅಚಡ್ತೆ
17. ಬೇಲ, ಬಿಳವಲ
18. ಕಣಗಿಲೆ
19. ಕೆಂದಾವರ, ಕೆಂಪು ನೈಡಿಲೈ
20. ಕಸ್ತೂರಿ, ಜಟಾಕಸ್ತೂರಿ
21. ಕಾಡು ಕುಕರಿ
22. ಮಲ್ಲಿಗೆ, ಕೋಲು ಮಲ್ಲಿಗೆ
23. ಬಿಳಿ ತಾವರೆ
24. ಕುರಂಟ, ಗೊರಟ
25. ಕ್ಯಾದಿಕೆ, ಕೇದಿಗೆ
26. ಕೆಂಪು ಮಂದಾರ
27. ಕಾಚಿ, ಗಣಕಿ
28. ಬಳ್ಳಿಗರಿಕೆ, ಅಮ್ಮಟಿಹುಲ್ಲು
29. ಶಂಖ ಪುಷ್ಪ
30. ಸಂಪಿಗೆ
31. ಸಂಪಿಗೆ
32. ಮಾವು
33. ಅಸ್ತಂಬ್ಯದ
34. ಶತಾವರಿ
35. ದಾಸವಾಳ ರುದ್ರ ಪುಷ್ಪ
36. ಜಾಜಿಮಲ್ಲಿಗೆ
37. ಲಿರಭ, ನಿಂಬೆ
38. ನೇರಳೆ
39. ದಾಲಚಿನ್ನಿ
40. ಎಳ್ಳು
41. ರಾಮ ತುಳಸಿ
    ಕೃಷ್ಣ ತುಳಸಿ,

ವಿಷ್ಣು ಪ್ರಿಯ

42. ದತ್ತೂರ
43. ದವನ
44. ದಾಳಿಂಭೆ
45. ಗರಿಕೆ
46. ನೆಲ್ಲಿ ಅಮಲಕ
47. ದೇವದಾರು
48. ತುಂಬಿ
49. ನಾಗ ಸಂಪಿಗೆ
    ನಾಗ ಕೇಸರ
50. ವಿಳ್ಳದ ಎಲೆ
51. ಕರಿಲೆಕ್ಕಿ, ಕರಿನೆಕ್ಕಿ
52. ಬೇವು
53. ನೀಲ ಕಮಲ
54. ನಂದ ಬಟ್ಟಲು
55. ಕಮಲ,
    ಶ್ವೇತ ಕಮಲ
56. ಮುತ್ತುಗ
57. ಪಾಟಲ
58. ಪಾರಿಜಾತ
59. ಊರಹೊನ್ನಿ,
    ಉಂಡೆಕಾಯಿ
60. ಅಡಿಕೆ
61. ಬೋರೆ
62. ಬಿಲ್ವಪದ್ರಿ
63. ಹೆಗ್ಗುಳ್ಳ, ಕಿರಗುಳ್ಳಿ
64. ಕಾಡಗರಬ
65. ಮರುಗ, ಬನತುಲಸಿ
66. ಮಲ್ಲಿಗೆ
67. ದವನ
68. ಮಧು ಮಲ್ಲಿಗೆ

69. ಪ್ರಿಯ ಸಪೂಜಾ,
ಕಾಡು ಮಲ್ಲಿಗೆ
70. ಬಕುಲ
71. ಆಲ
72. ವಿಷ್ಣವಳಿ
73. ವಿಷ್ಣುವಳಿ
74. ಬಿದಿರು (ಕೊಳಲು)
75. ಶ್ವೇತ ಕಮಲ, ಬಿಳಿ ತಾವರೆ
76. ಬನ್ನಿ
77. ಶ್ರೀಗಂಧ
78. ಬಿಳಿಯಕ್ಕ
79. ಬಿಳಿಗರಿಕೆ
80. ರಕ್ತಗಂಧಿ, ಲೆಕ್ಕಿ ಸಿಂಧೂರ
81. ಸುಗಂಧಿ, ರಜನಿಗಂಧ
82. ಸುರ್ಗೆ, ಸುರಗೆ
83. ರುದ್ರಾಕ್ಷಿ
84. ಸುರಭಿ ಅಂಬುಕ್ರನಾದ ಸುರಭಿ ಕೆಂಪಕ
85. ಸೇವಂತಿಗೆ
86. ಅಂಕೋಲೆ
87. ಅಮಟಿ
88. ಚಳ್ಳ
89. ಕಕ್ಕೊಲ
90. ಬೆಟ್ಟತಾವರೆ
91. ಕಾಸರಕ
92. ಹಿಪ್ಪಲಿ ಬಳ್ಳಿ
93. ಕಕ್ಕೆ
94. ಕುದ, ಗೊರಸಿನ
95. ಕಾಚೀನ ಮರ, ಕಗ್ಗಲೆ
96. ತಾಳಿಮರ
97. ಕರಿಮರ
98. ತಿಲಕ

99. ದರ್ಬೆ
100. ಬಸರಿ
101. ಪಾದರಿ
102. ದನಸು
103. ಸೂರ್ಕಲ ಮರ
104. ಇಪ್ಪೆ
105. ಕಬ್ಬು
106. ರಕ್ತ ಚಂದನ
107. ಲವಂಗ
108. ವಾಟೆ
109. ಬಿದಿರು
110. ಬಿದಿರು
111. ಹಣ್ ಸಂಪಿಗೆ
112. ಬಿಡ್ತ
113. ಬೇಟೆ
114. ಸಿರ್ಸಲ
115. ಸರಲ
116. ಹಾಲೆ, ಮದ್ದಾಲೆ
117. ರಾಳಮರ
118. ಸಾಲ
119. ಹಾಲಬಳ್ಳಿ, ಸುಗಂಧಿ ಬಳ್ಳಿ
120. ಕರಿ ಮುತ್ತಲ
121. ಹಿಂತಾಲ
122. ಮಾವು
123. ಕುರಂಟ, ಗೊರಟ
124. ಬನತುಲಸಿ,
ಮರುವಕ
125. ಸರ್ಪಗಂಧ

ಹಾಸನ ಜಿಲ್ಲೆಯ ಗಂಡಸಿ ಕ್ಷೇತ್ರದ ಅರಣ್ಯ ಪ್ರದೇಶ.

2703 - ಶ್ರೀ ಬಿ. ಶಿವರಾಮು (ಗಂಡಸಿ ಕ್ಷೇತ್ರ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?